

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ನಮ್ಮೊಳಗೊಬ್ಬ 'ಲೋಕಪಾಲ'!

ಎಪ್ಪತ್ತರ ದಶಕದಲ್ಲಿ ವಿಯೆನ್ನಾ ವಿಶ್ವವಿದ್ಯಾನಿಲಯದಲ್ಲಿ ಶಿಷ್ಯವೇತನದ (Research Fellowship) ಮೇಲೆ ಎರಡು ವರ್ಷಗಳ ಕಾಲ ಸಂಶೋಧನೋತ್ತರ ಅಧ್ಯಯನ (Post-doctoral Studies) ಮಾಡುತ್ತಿದ್ದಾಗ ನಡೆದ ಒಂದು ಘಟನೆ. ವಿಯೆನ್ನಾ ಯೂರೋಪ್ ಖಂಡದ ಮಧ್ಯಭಾಗದಲ್ಲಿರುವ ಆಸ್ಟ್ರಿಯಾ ದೇಶದ ರಾಜಧಾನಿ. ನೀವು ಯೂರೋಪಿನ ಭೂಪಟವನ್ನು ನೋಡಿದರೆ ಆಸ್ಟ್ರಿಯಾ ದೇಶ ಆಕಾರದಲ್ಲಿ 'ಜಠರ'ದಂತೆ ಕಾಣಿಸುತ್ತದೆ. ಅದರ ನೆರೆಹೊರೆಯ ದೇಶಗಳೆಂದರೆ ಪಶ್ಚಿಮಕ್ಕೆ ಜರ್ಮನಿ ಮತ್ತು ಸ್ವಿಟ್ಜರ್‌ಲೆಂಡ್, ದಕ್ಷಿಣಕ್ಕೆ ಇಟಲಿ, ಉತ್ತರಕ್ಕೆ ಜೆಕೊಸ್ಲವಾಕಿಯಾ ಮತ್ತು ಪೂರ್ವಕ್ಕೆ ಈ ಹಿಂದಿನ ಅವಿಭಜಿತ ಯುಗೋಸ್ಲಾವಿಯಾ ಮತ್ತು ಹಂಗೇರಿ. ರಜಾ ವೇಳೆಯಲ್ಲಿ ಜರ್ಮನಿಗೆ ಹೋಗಿಬರಬೇಕೆಂಬ ಮನಸ್ಸಾಯಿತು. ಅಲ್ಲಿಯ ಉತ್ತರ ಭಾಗದಲ್ಲಿರುವ ಎರಡನೆಯ ಪ್ರಮುಖ ನಗರವಾದ ಹಾಂಬುರ್ಗ್‌ನಲ್ಲಿ ನಮ್ಮ ಮಠದ ಶಿಷ್ಯರೊಬ್ಬರು ಇದ್ದರು. ಅವರ ಹೆಸರು ಬೇತೂರು ಚನ್ನಬಸಪ್ಪ. ದಾವಣಗೆರೆಯ ಸಮೀಪದ ಆನೆಕೊಂಡ ಗ್ರಾಮದವರು. ಬಹಳ ವರ್ಷಗಳ ಹಿಂದೆ ಅವರು ಜರ್ಮನಿಗೆ ಹೋಗಿ ಹಾಂಬುರ್ಗ್ ಬಂದರಿನಲ್ಲಿ ಎಂಜಿನಿಯರಾಗಿ ಕೆಲಸಮಾಡುತ್ತಿದ್ದರು. ಜರ್ಮನಿಯ ಮಹಿಳೆಯೊಬ್ಬಳನ್ನು ಮದುವೆಯಾಗಿ ಅಲ್ಲಿಯೇ ನೆಲೆಸಿರುವ ಇವರಿಗೆ ಈಗ 86 ವರ್ಷದ ಇಳಿ ವಯಸ್ಸು. ವಿಭಿನ್ನ ಧರ್ಮಗಳ ಈ ವೃದ್ಧದಂಪತಿಗಳು ಆಧುನಿಕ ಸಾಫ್ಟ್‌ವೇರ್ ಎಂಜಿನಿಯರುಗಳಿಗೆ ಕೌಟುಂಬಿಕ ಜೀವನವನ್ನು ಹೇಗೆ ಸಾಮರಸ್ಯದಿಂದ ನಡೆಸಬೇಕೆಂಬುದಕ್ಕೆ ಮಾದರಿಯಾಗಿದ್ದಾರೆ. ಅವರನ್ನು ನೋಡಲು ನಿರ್ಧರಿಸಿ ವಿಯೆನ್ನಾದಿಂದ ಹಾಂಬುರ್ಗ್‌ಗೆ ರೈಲಿನಲ್ಲಿ ರಾತ್ರಿಯೆಲ್ಲಾ ಪ್ರಯಾಣ. ಅತಿಥಿಗಳಾಗಿ ಹೋಗುವಾಗ ಬರಿಗೈಯಲ್ಲಿ ಹೋಗಬಾರದೆಂದು ಅಲ್ಲಿಯ ಪದ್ಧತಿಗನುಗುಣವಾಗಿ ಒಂದು ಹೂಗುಚ್ಛವನ್ನು ಖರೀದಿಸಲು ಸಂಜೆ ರೈಲನ್ನು ಹತ್ತುವ ಮೊದಲು ರೈಲ್ವೆನಿಲ್ದಾಣದಲ್ಲಿದ್ದ ಹೂವಿನ ಅಂಗಡಿಗೆ ಹೋದೆವು.



ಹೂಗುಚ್ಛವನ್ನು ಖರೀದಿಸಿ ಕೈಚೀಲದಲ್ಲಿಟ್ಟುಕೊಳುವ ಮೊದಲು ನಾಳೆ ಬೆಳಗ್ಗೆ ಹಾಂಬುರ್ಗ್ ತಲುಪುವವರೆಗೆ ಇದು ಬಾಡದಂತೆ ಇರುವುದೇ ಎಂದು ಹೂ ಅಂಗಡಿಯವಳನ್ನು ಕೇಳಿದಾಗ ಆಕೆ ಗರಬಡಿದವಳಂತೆ "Leider nein, entschuldigen Sie bitte" (ಇಲ್ಲ, ದಯಮಾಡಿ ಕ್ಷಮಿಸಿ) ಎಂದು ಹೇಳಿ ನಮ್ಮ ಕೈಗೆ ಆಗತಾನೇ ಕೊಟ್ಟಿದ್ದ ಹೂಗುಚ್ಛವನ್ನು ತಕ್ಷಣವೇ ಹಿಂದಕ್ಕೆ ಪಡೆದಳು. ಹಾಂಬುರ್ಗ್ ರೈಲ್ವೆ ನಿಲ್ದಾಣವನ್ನು ತಲುಪಿದ ಮೇಲೆ ಅಲ್ಲಿಯೇ ಯಾವುದಾದರೂ ಅಂಗಡಿಯಲ್ಲಿ ಕೊಂಡುಕೊಳ್ಳಿ ಎಂದು ಸಲಹೆ ಮಾಡಿ ಹಣವನ್ನು ವಾಪಾಸ್ ಕೊಡಲು ಮುಂದಾದಳು. ರೈಲಿನಿಂದ ಇಳಿದಾಗ ನಮ್ಮನ್ನು ಕರೆದುಕೊಂಡು ಹೋಗಲು ಆತಿಥೇಯರು ಬಂದಿರುತ್ತಾರೆ, ಅವರ ಎದುರಿಗೆ ಹೂ ಖರೀದಿಸಲು ಸಾಧ್ಯವಾಗುವುದಿಲ್ಲ ಎಂದು ಹೇಳಿದಾಗ ಆ ಮಹಿಳೆ ನಮಗೆ ಕೊಟ್ಟ ಸಲಹೆ: "ಹಾಂಬುರ್ಗ್ ರೈಲ್ವೆ ನಿಲ್ದಾಣದಲ್ಲಿ ಬೇಕಾದಷ್ಟು ಹೂವಿನ ಅಂಗಡಿಗಳು ಇವೆ. ರೈಲಿನಿಂದ ಇಳಿದಾಗ ಉಭಯಕುಶಲೋಪರಿಯ ಮಾತುಗಳ ನಂತರ ಬಾತ್ ರೂಂಗೆ ಹೋಗಿಬರುವುದಾಗಿ ನಿಮ್ಮ ಆತಿಥೇಯರಿಗೆ ಹೇಳಿ ಸಮಯಾವಕಾಶ ಮಾಡಿಕೊಂಡು ಹೋಗಿ ನಿಮಗೆ ಬೇಕಾದ ಹೂವನ್ನು ಕೊಂಡುಕೊಳ್ಳಿ." ಆಕೆಯು ಕೊಟ್ಟ ಸಲಹೆ ವ್ಯಾವಹಾರಿಕವಾಗಿ ಸರಿಯೆನಿಸಿದರೂ ಸಾಂದರ್ಭಿಕವಾಗಿ ಸರಿಯಾಗಲಾರದೆಂದು ಹೇಳಿ ಅದೇ ಹೂಗುಚ್ಛವನ್ನು ಮರಳಿ ಪಡೆಯಲು ಕೇಳಿದಾಗ ಆ ಮಹಿಳೆ ನಮ್ಮ ಒತ್ತಾಯಕ್ಕೆ ಮಣಿದು ಆಲೋಚಿಸಿ ಒಂದು ಪ್ಲಾಸ್ಟಿಕ್ ಬಟ್ಟಲಲ್ಲಿ ನೀರನ್ನು ಹಾಕಿ ಅದರಲ್ಲಿ ಹೂಗುಚ್ಛವನ್ನಿಟ್ಟು ಚೆನ್ನಾಗಿ ಪ್ಯಾಕ್ ಮಾಡಿ ಮುಗುಳುನಗೆಯೊಂದಿಗೆ ನಮ್ಮ ಕೈಗಿತ್ತಳು. ಆಕೆಯ ಸೌಜನ್ಯಯುತವಾದ ವರ್ತನೆ, ಗ್ರಾಹಕರ ಬಗ್ಗೆ ಆಕೆಗಿದ್ದ ಕಾಳಜಿ ನಮ್ಮನ್ನು ಬೆರಗುಗೊಳಿಸಿದವು.

ರೈಲನ್ನು ಹತ್ತಿ ಕುಳಿತಾಗ ದಾರಿಯುದ್ದಕ್ಕೂ ಮನಸ್ಸಿನಲ್ಲಿ ಮೂಡಿ ಬಂದ ಆಲೋಚನಾ ತರಂಗಗಳೆಂದರೆ: ನಮ್ಮ ದೇಶದಲ್ಲಿ ಬೆಂಗಳೂರಿನಿಂದ ಬೆಳಗಾಂಗೆ ಹೊರಟ ಪ್ರಯಾಣಿಕನೊಬ್ಬ ಇದೇ ಪ್ರಶ್ನೆಯನ್ನು ಬೆಂಗಳೂರಿನ ಹೂ ಅಂಗಡಿಯವನಿಗೆ ಕೇಳಿದ್ದರೆ ಏನೆಂದು ಉತ್ತರ ಬರಬಹುದು: "ಮತ್ ಸೋಚೋ ಸಾಹಬ್, ಹಮಾರೀ ಫೂಲ್ ಕೀ ಕರಾಮತ್ ಕ್ಯಾ ಸಮಝುತೇ ಹೈ ಆಪ್? ಏಕ್ ರಾತ್ ನಹೀಂ ಏಕ್ ಹಫ್ತಾ ಹೋಗಾ ತೋ ಭೀ ಕುಛ್ ನಹೀಂ ಬಿಗಾಡತಾ!" ನಮ್ಮ ದೇಶದಲ್ಲಿ 'ಗ್ರಾಹಕರ ಸೇವೆಯೇ ನಮ್ಮ ಗುರಿ' ಎಂದು ಬೋರ್ಡು ಹಾಕಿಕೊಂಡು ಕಳಪೆ ವಸ್ತುಗಳನ್ನು ಹೇಗಾದರೂ ಕೈದಾಟಿಸಿ ಲಾಭಗಳಿಸುವುದೇ ಏಕೈಕ ಗುರಿ ಆಗಿರುತ್ತದೆ. ಆ ದೇಶಗಳಲ್ಲಿ ಅಂಗಡಿಗಳಿಗೆ ನೀವು ಹೋದರೆ ಚೌಕಾಸಿಯ ಮಾತೇ ಇಲ್ಲ. ಒಂದು ವಸ್ತುವನ್ನು ಖರೀದಿಸಿ ಮನೆಗೆ ಹೋದ ನಂತರ ಅದು ತೃಪ್ತಿಕರವಾಗಿಲ್ಲ ಎಂದೆನಿಸಿದರೆ ಅಥವಾ ನಿಮ್ಮ ನಿರೀಕ್ಷೆಯಂತೆ ಅದು ಕೆಲಸ ಮಾಡದಿದ್ದರೆ ಕ್ಲುಪ್ತ ಅವಧಿಯೊಳಗೆ ಅದನ್ನು ಹಿಂದಿರುಗಿಸಿ ಹಣವನ್ನು ವಾಪಾಸ್ ಪಡೆಯಬಹುದು. ಅಂಗಡಿಯವನು ತನಗೆ ಹಿಂದಿರುಗಿ ಬಂದ ವಸ್ತುವನ್ನು ಯಾವ ತಕರಾರೂ ಇಲ್ಲದೆ ಸುಮ್ಮನೆ ಹಿಂದಕ್ಕೆ ಪಡೆದು ಹಣವನ್ನು ನಗುನಗುತ್ತಲೇ ಹಿಂತಿರುಗಿಸುತ್ತಾನೆ. ಆದರೆ ನಮ್ಮಲ್ಲಿ 'ಒಮ್ಮೆ ಕೊಂಡ ಸಾಮಗ್ರಿಯನ್ನು ಹಿಂದಕ್ಕೆ ಪಡೆಯುವುದಿಲ್ಲ ಅಥವಾ ಬದಲಾಯಿಸಲಾಗುವುದಿಲ್ಲ' ಎಂದು ಸ್ಪಷ್ಟವಾಗಿ ಬಿಲ್ ಮೇಲೆಯೇ ದಪ್ಪಕ್ಷರಗಳಲ್ಲಿ ಮುದ್ರಿಸಿರುತ್ತಾರೆ. ಕೊಂಡ ವಸ್ತುವನ್ನು ಟೆಸ್ಟ್ ಮಾಡಿ ಸರಿಯಿದೆಯೇ ಎಂದು ಖಾತ್ರಿಪಡಿಸಿಕೊಳ್ಳಲು ಬಯಸಿದರೆ ಆ ದೇಶದ ಅಂಗಡಿಯವನು ನಗುತ್ತಾನೆ; ಮಾರಾಟಕ್ಕಿಟ್ಟಿರುವ ಹೊಸ ವಸ್ತುವನ್ನು ಟೆಸ್ಟ್ ಮಾಡಬೇಕೇಕೆ? ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಾನೆ. ಇಲ್ಲಿಯ ಅಂಗಡಿಯವನು ಕೊಟ್ಟ ವಸ್ತು ದೋಷದಿಂದ ಕೂಡಿದೆ ಎಂದು ಗ್ರಾಹಕ

ವಾಪಾಸು ತಂದರೆ 'ಒಯ್ಯುವ ಮೊದಲು ಟೆಸ್ಟ್ ಮಾಡಿಸಿ ಖಾತ್ರಿ ಮಾಡಿಕೊಂಡು ಒಯ್ಯಬೇಕಾಗಿತ್ತು; ನಂತರದಲ್ಲಿ ಬರುವ ದೂರುಗಳಿಗೆ ನಾನು ಜವಾಬ್ದಾರನಲ್ಲ' ಎಂದು ತಲೆಯಲ್ಲಾಡಿಸುತ್ತಾನೆ!

ಅಂಗಡಿಯವನು ತಕರಾರಿಲ್ಲದೆ ವಸ್ತುವನ್ನು ವಾಪಾಸು ತೆಗೆದುಕೊಳ್ಳುತ್ತಾನೆಂದು ಆ ದೇಶಗಳಲ್ಲಿ ಯಾವ ಗ್ರಾಹಕನೂ ಸುಖಾಸುಮ್ಮನೆ ವಸ್ತುಗಳನ್ನು ವಾಪಾಸುಕೊಟ್ಟು ಆಧುನಿಕ ಮಾಡೆಲನ್ನು ಹೊಸದಾಗಿ ಕೊಳ್ಳಲು ಬಯಸುವುದಿಲ್ಲ. ಅಂಗಡಿಕಾರ ಗ್ರಾಹಕರಿಗೆ ತೊಂದರೆ ಮಾಡದೆ ವಸ್ತುವನ್ನು ವಾಪಾಸು ಪಡೆದು ಹಣವನ್ನು ಪಾವತಿ ಮಾಡಿ ತನ್ನ ethics ಅನ್ನು ಪಾಲಿಸಿದರೆ, ಗ್ರಾಹಕನೂ ಸಹ ಅಂಗಡಿಕಾರನ ಈ ಮನೋಧರ್ಮವನ್ನು ದುರುಪಯೋಗ ಮಾಡಿಕೊಳ್ಳದೆ ತನ್ನ ethics ಅನ್ನು ಕಾಪಾಡಿಕೊಳ್ಳುತ್ತಾನೆ. ಕ್ಲುಪ್ತ ಅವಧಿಯಲ್ಲಿ (ಸಾಮಾನ್ಯವಾಗಿ ಒಂದು ತಿಂಗಳು) ಅದನ್ನು ಹಿಂದಿರುಗಿಸಿ ಹಣ ಪಡೆದು ಹೊಸ ಮಾಡೆಲನ್ನು ಖರೀದಿಸುವ ಅವಕಾಶವಿದ್ದರೂ ದುರುಪಯೋಗಪಡಿಸಿಕೊಳ್ಳುವುದಿಲ್ಲ. ಇಬ್ಬರೂ ತಂತಮ್ಮ ಧರ್ಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ನಮ್ಮ ದೇಶದಲ್ಲಿ ಇಂಥ ವ್ಯವಸ್ಥೆ ಇದ್ದರೆ ಏನಾಗುತ್ತಿತ್ತು? ಯಾರ ಮನೆಯಲ್ಲಿಯೂ ಹಳೆಯ ಟಿ.ವಿ ಇರುತ್ತಿರಲಿಲ್ಲ! ಎಲ್ಲರ ಮನೆಗಳಲ್ಲಿಯೂ ವಾರಕ್ಕೊಂದು ಹೊಚ್ಚ ಹೊಸ ಮಾಡೆಲ್ ಟಿ.ವಿ ಯ ಶೀವಿ! ನಮ್ಮಲ್ಲಿ ತನ್ನ ethics ಪಾಲಿಸಬೇಕೆಂಬ ಇರಾದೆ ಗ್ರಾಹಕನಿಗೂ ಇಲ್ಲ; ಮಾರುವವನಿಗೂ ಇಲ್ಲ. ಯಾರು ಎಷ್ಟು ಚೆನ್ನಾಗಿ ಇನ್ನೊಬ್ಬರಿಗೆ ಪಂಗನಾಮ ಹಾಕಬಹುದು ಎಂಬ ಅನೈತಿಕ ಸ್ಪರ್ಧೆಯೇ ಇಲ್ಲಿನ ವ್ಯಾಪಾರದ ಧರ್ಮ ಮತ್ತು ಮರ್ಮ! ಮಾರುವ/ಕೊಳ್ಳುವ ಈ ಪ್ರಕ್ರಿಯೆಯ ಹಿಂದಣ ನೈತಿಕತೆ ಅತಿ ಚಿಕ್ಕದು ಎಂದೆನಿಸಬಹುದು. ಆದರೆ ವ್ಯಾಪಾರವೂ ಒಂದು ಧರ್ಮ, ಅದು ಪಾರಮಾರ್ಥಿಕತೆಯಿಂದ ಕೂಡಿರಬೇಕೆಂದು ಸೂಚಿಸುವ ಬಸವಣ್ಣನವರ ವಚನವೊಂದು ಹೀಗಿದೆ:

**ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ**
**ಹರದ ಕುಳ್ಳಿರ್ದ ನಮ್ಮ ಮಹದೇವಸೆಟ್ಟಿ.**
**ಒಮ್ಮನವಾದರೆ ಒಡನೆ ನುಡಿವನು**
**ಇಮ್ಮನವಾದರೆ ನುಡಿಯನು;**
**ಕಾಣಿಯ ಸೋಲ, ಅರ್ಧಗಾಣಿಯ ಗೆಲ್ಲ**
**ಜಾಣ ನೋಡವ್ವಾ ನಮ್ಮ ಕೂಡಲಸಂಗಮದೇವ!**

ಅಂಗಡಿಯನ್ನು ತೆರೆದು ವ್ಯಾಪಾರಕ್ಕೆ ಕುಳಿತಿರುವ ಹರದನ ರೂಪದಲ್ಲಿ ದೇವರನ್ನು ಚಿತ್ರಿಸಿರುವ ಬಸವಣ್ಣನವರ ಈ ವಚನದಲ್ಲಿ ವ್ಯಾಪಾರವೂ ತುಂಬಾ ಪವಿತ್ರವಾದುದೆಂಬ ಧ್ವನಿ ಅಡಗಿದೆ. ದೈನಂದಿನ ನಡವಳಿಕೆಯಲ್ಲಿ ಇಂಥ ಸದಾಚಾರಗಳು ಲೋಕಪಾಲ ವಿಧೇಯಕವೂ ಮಾಡಲಾಗದ ಹೆಚ್ಚಿನ ಸಾಧನೆಯನ್ನು ಮಾಡಬಲ್ಲವು. ಲೋಕಪಾಲ ಮಸೂದೆ ಜಾರಿಗೆ ಬಂದರೆ ಇಡೀ ದೇಶದಲ್ಲಿ ದಿನದ ಬೆಳಕು ಹರಿಯುವುದರೊಳಗೆ ಭ್ರಷ್ಟಾಚಾರ ನಿರ್ಮೂಲನೆ ಆಗಲಾರದು. 'ಸ್ವತಃ ನಾನೇ ಚುನಾವಣೆಗೆ ನಿಂತರೂ ಗೆಲ್ಲಲು ಸಾಧ್ಯವಿಲ್ಲ' ಎಂದು ಅಣ್ಣಾ ಹಜಾರೆಯವರೇ ಅದನ್ನು ಸೂಚ್ಯವಾಗಿ ಈಗಾಗಲೇ ಹೇಳಿದ್ದಾರೆ.

ಸಹೃದಯ ಓದುಗರೇ! ನಮ್ಮ ಹೋರಾಟ ರಾಜಕೀಯ ಭ್ರಷ್ಟಾಚಾರದ ವಿರುದ್ಧ ಮಾತ್ರವೇ ಸೀಮಿತವಾಗದೆ ಪ್ರತಿಯೊಬ್ಬ ನಾಗರಿಕನ ಅಂತಃಶುದ್ಧಿಗೆ ಒತ್ತು ಬರಬೇಕು. 'ಶಾಸನಬದ್ಧ ಲೋಕಪಾಲ್'ಗಿಂತ ವೈಯಕ್ತಿಕ ಸ್ತರದಲ್ಲಿ ಸ್ವಯಂ ನಿಯಂತ್ರಣಕ್ಕೆ ಅಗತ್ಯವಾದ 'ಧರ್ಮಬದ್ಧ ಲೋಕಪಾಲ್' ಇಂದಿನ ತುರ್ತು ಅಗತ್ಯ. 'ನೈತಿಕ ಪಾಲನೆ' ಲೋಕಪಾಲಕ್ಕಿಂತಲೂ ದೊಡ್ಡದು. ಅದನ್ನು ಜನ ಬೆಳೆಸಿಕೊಳ್ಳಬೇಕು. ದೈನಂದಿನ ವ್ಯವಹಾರದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ನಡವಳಿಕೆಗಳನ್ನು ವಿಶ್ಲೇಷಿಸಿ, ಒರೆಗೆ ಹಚ್ಚಿ ನಿಯಂತ್ರಿಸುವ 'ಲೋಕಪಾಲ' ತಾನೇ ಆಗಬೇಕು. ಅದಕ್ಕೇ ಬಸವಣ್ಣನವರು ಹೇಳಿದ್ದು:

**ಲೋಕದ ಡೊಂಕ ನೀವೇಕೆ ತಿದ್ದುವಿರಿ?**
**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ,**
**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ!'**

**18.8.2011**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑